

ಹೊಸ ದಿಗಂತ 3
18 Sep 2024

## ಮುಸುಕಿನ ಜೋಳ, ಅಲಸಂದೆ, ಸೂರ್ಯಕಾಂತಿ, ನೇಪಿಯರ್ ನೂತನ ತಳಿ ಅಭಿವೃದ್ಧಿ

# ಜಿಕೆವಿಕೆಯಲ್ಲಿ ನ.14ರಿಂದ 17ರವರೆಗೆ ಕೃಷಿ ಮೇಳ

• ಅನುಷಾ.ಕೆ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯವು ಪ್ರತಿ ವರ್ಷ ಜಿಕೆವಿಕೆಯಲ್ಲಿ ಹಮ್ಮಿಕೊಳ್ಳಲಾಗುವ ಬಹುನಿರೀಕ್ಷಿತ ಕೃಷಿ ಮೇಳವು ಹವಾಮಾನ ಚತುರ ಡಿಜಿಟಲ್ ಕೃಷಿ ಎಂಬ ಶೀರ್ಷಿಕೆಯಡಿ ನ.14ರಿಂದ 17ರವರೆಗೆ ನಡೆಯಲಿದೆ. ಅಂದು ರೈತರಿಗೆ ಸಹಾಯವಾಗುಂತಹ ಮುಸುಕಿನ ಜೋಳ, ಅಲಸಂದೆ, ಸೂರ್ಯಕಾಂತಿ ಹಾಗೂ ನೇಪಿಯರ್ ಎಂಬ ನೂತನ ತಳಿಗಳು ರೈತರ ಕೈಸೇರಲಿವೆ.

**ರೋಗ ನಿರೋಧಕ ಅಲಸಂದೆ ಕೆ.ಸಿ.12 ತಳಿ:** ಕೃಷಿ ವಿವಿಯು ಕೆ.ಸಿ.12 ಅಲಸಂದೆಯ ತಳಿಯನ್ನು ಅಭಿವೃದ್ಧಿಪಡಿಸಿದ್ದು, ಇದನ್ನು ಜುಲೈ–ಆಗಸ್ಟ್–ಸೆಪ್ಟೆಂಬರ್ ಮತ್ತು ಜನವರಿ–ಫೆಬ್ರವರಿ ಬಿತ್ತನೆಗೆ ಸೂಕ್ತವಾಗಿರುವ 80ರಿಂದ 85 ದಿನಗಳ ಅವಧಿಯ ತಳಿಯಾಗಿದ್ದು, ಹೆಕ್ಟೇರ್‌ಗೆ 13ರಿಂದ 14 ಕ್ವಿಂಟಾಲ್ ಇಳುವರಿ ಬರಲಿದೆ. ನೇರವಾಗಿರುವ ಸಸ್ಯ ಪ್ರಕಾರದ ದಪ್ಪ ಮತ್ತು ಹಸಿರು ಬಣ್ಣದ ಕಾಯಿಗಳು ಹಾಗೂ ಮಧ್ಯಮ ದಪ್ಪ ಮತ್ತು ತಿಳಿ ಕಂದು ಬಣ್ಣದ ಬೀಜಗಳಾಗಿದ್ದು, ಬೇಸಿಗೆ ಮತ್ತು ಮುಂಗಾರಿನಲ್ಲೂ ಬೆಳೆಯಬಹುದಾಗಿದೆ.

ಇನ್ನು ಅಲಸಂದೆಗೆ ಬರುವಂತಹ ಅಂಗಮಾರಿ ರೋಗ, ನಂಜಾಣು ಹಾಗೂ ಬೇರು ಕೊಳೆ ರೋಗ ನಿರೋಧಕ ಶಕ್ತಿಯನ್ನು ಹೊಂದಿರುವುದೇ. ಇದುವೇ ಈ ನೂತನ ತಳಿಯ ವಿಶೇಷವಾಗಿದೆ ಎನ್ನಬಹುದಾಗಿದೆ. ಇನ್ನು ಈ ಅಲಸಂದೆಯನ್ನು ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ, ಚಾಮರಾಜನಗರ, ಮೈಸೂರು ಮುಂತಾದ ಕಡೆಗಳಲ್ಲಿ ಬೆಳೆಯಬಹುದಾಗಿದೆ.

**ಬಾಜ್ರ ನೇಪಿಯರ್ ಪಿಬಿಎನ್-342:** ಇದನ್ನು ಹೆಕ್ಟೇರ್‌ಗೆ 1497.8 ಕ್ವಿಂಟಾಲಿನಲ್ಲಿ ಹಸಿರು ಮೇವಿನ ಇಳುವರಿ ನೀಡುತ್ತದೆ. ಇನ್ನು ಹೆಚ್ಚಿನ ಒಣಮೇವಿನಲ್ಲಿ 204.7ಕ್ವಿಂಟಾಲು ಇಳುವರಿ ಬರಲಿದೆ. ಇದರ ಎಲೆಗಳು ಅಗಲವಾಗಿರುತ್ತದೆ ಹಾಗೂ ಕಾಂಡ ಮೃದುವಾಗಿರುತ್ತದೆ. ಇದರಲ್ಲಿ ಸಸಾರಜನಕವೂ ಅಧಿಕವಾಗಿದ್ದು, ಗುಣಮಟ್ಟದ ಪೌಷ್ಟಿಕಾಂಶ ಒಳಗೊಂಡಿರುತ್ತದೆ.




ದಿಗಂತ ವಿಶೇಷ

### ಹೆಕ್ಟೇರ್‌ಗೆ 95 ಕ್ವಿಂಟಾಲ್ ಇಳುವರಿ ಜೋಳ

ಬಹುಪಯೋಗಿಯಾಗಿರುವಂತಹ ಮುಸುಕಿನ ಜೋಳ ಎಂಎಹೆಚ್ 15-84 ತಳಿಯನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಳಿಯು ಹೆಕ್ಟೇರ್‌ಗೆ 92-95 ಕ್ವಿಂಟಾಲು ಇಳುವರಿ ನೀಡುತ್ತದೆ. ಇದರ ಎಲೆ ಅಂಗಮಾರಿ ರೋಗಕ್ಕೆ ನಿರೋಧಕತೆ ಹಾಗೂ ಕೇದಿಗೆ ರೋಗಕ್ಕೆ ಸಾಧಾರಣ ಸಹಿಷ್ಣುತೆ ಹೊಂದಿದ್ದು, ಆಕರ್ಷಕ ಕಾಳಿನ ಕಿತ್ತಳೆ ಬಣ್ಣದ ಕಾಳಿನಿಂದ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಹೊಂದಿರುವುದರೊಂದಿಗೆ ರೋಗ ನಿರೋಧಕ ಶಕ್ತಿ ಅಧಿಕವಾಗಿದೆ.

### ಹೆಚ್ಚು ಎಣ್ಣೆ ಅಂಶದ ಸೂರ್ಯಕಾಂತಿ ಕೆಬಿಎಸ್‌ಎಚ್ -90

ಕಳೆದ ಬಾರಿ ರೈತರಿಗೆ ಕಡಿಮೆ ಅವಧಿಯಲ್ಲಿ ಅತ್ಯಧಿಕ ಇಳುವರಿ ಪಡೆದು ಲಾಭ ಮಾಡಬಹುದಾ ಅಲಂಕಾರಿಕ ಸೂರ್ಯಕಾಂತಿಯನ್ನು ವಿವಿಯು ರೈತರಿಗೆ ಪರಿಚಯಿಸಿತ್ತು. ಅದರಂತೆ ಇದೀಗ ಹೆಚ್ಚು ಎಣ್ಣೆ ಅಂಶವನ್ನು ಹೊಂದಿರುವಂತಹ ಸೂರ್ಯಕಾಂತಿ ಕೆಬಿಎಸ್‌ಎಚ್-90 ಎಂಬ ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದು 80ದಿನಗಳ ಅಲ್ಪಾವಧಿಯ ತಳಿಯಾಗಿದ್ದು, ಹೆಕ್ಟೇರ್‌ಗೆ 23ರಿಂದ 24 ಕ್ವಿಂಟಾಲ್ ಇಳುವರಿ ಹಾಗೂ 9.0-9.4ಕ್ವಿಂಟಾಲ್‌ನಷ್ಟು ತೈಲದ ಇಳುವರಿ ನೀಡುತ್ತದೆ.

18-09-2024
Hosa Digantha Pg.03

---

# ನ.14ರಿಂದ 17ರವರೆಗೆ ಜಿಕೆವಿಕೆ ಕೃಷಿ ಮೇಳ

**ಬೆಂಗಳೂರು:** ಬೆಂಗಳೂರಿನ ಕೃಷಿ ವಿವಿ ಜಿಕೆವಿಕೆ ಆವರಣದಲ್ಲಿ ನ.14 ರಿಂದ 17 ರವರೆಗೆ ಹವಾಮಾನ ಚತುರ ಡಿಜಿಟಲ್ ಕೃಷಿ ಎಂಬ ಘೋಷವಾಕ್ಯದೊಂದಿಗೆ ಕೃಷಿ ಮೇಳ– 2024 ನ್ನು ಆಯೋಜಿಸಲಾಗಿದೆ. ಕೃಷಿ ಮೇಳದಲ್ಲಿ ನಾಲ್ಕು ನೂತನ ತಳಿಗಳು ಮತ್ತು ಹತ್ತೊಂಭತ್ತು ಹೊಸ ತಾಂತ್ರಿಕತೆಗಳನ್ನು ಬಿಡುಗಡೆ ಮಾಡಲಾಗುವುದು. ಮಳಿಗೆಗಳ ಕಾಯ್ದಿರಿಸುವಿಕೆಯು ಸೆ.23 ರಿಂದ ಪ್ರಾರಂಭವಾಗಲಿದೆ. ಹೆಚ್ಚಿನ ಮಾಹಿತಿಗೆ : 080–23638883 / 23330153 ಗೆ ಸಂಪರ್ಕಿಸಿ.

18-09-2024
Vishwa vani Pg.03

---

ngo@gmail.com. ಮೊ.ನಂ 8088433026, 80730

**ಕೃಷಿ ಕಾರ್ಯಕ್ರಮ** | 'ಹವಾಮಾನ ಚತುರ ಡಿಜಿಟಲ್ ಕೃಷಿ' ಘೋಷ ವಾಕ್ಯ | 17 ನವೀನ ತಾಂತ್ರಿಕತೆ ಬಿಡುಗಡೆ

# ನ.14ರಿಂದ 3 ದಿನ ಜಿಕೆವಿಕೆಯಲ್ಲಿ ಕೃಷಿಮೇಳ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಹೆಬ್ಬಾಳದ ಜಿಕೆವಿಕೆಯಲ್ಲಿ ಪ್ರಸಕ್ತ ಸಾಲಿನ ಕೃಷಿ ಮೇಳವನ್ನು 'ಹವಾಮಾನ ಚತುರ ಡಿಜಿಟಲ್ ಕೃಷಿ' ಎಂಬ ಘೋಷವಾಕ್ಯದೊಂದಿಗೆ ನ.14 ರಿಂದ 17 ರವರೆಗೂ ಆಯೋಜಿಸಿದೆ.

ಅಧಿಕ ಇಳುವರಿ ನೀಡುವ ಮುಸುಕಿನ ಜೋಳ, ಅಲಸಂದೆ, ಸೂರ್ಯಕಾಂತಿ, ನೇಪಿಯರ್‌ನ ನೂತನ ತಳಿ ಲೋಕಾರ್ಪಣೆಯಾಗಲಿವೆ. ಕಳೆ ನಿರ್ಮೂಲನೆ, ಕೀಟ ಹತೋಟಿ ಸೇರಿ 17 ನವೀನ ತಾಂತ್ರಿಕತೆಗಳೂ ಬಿಡುಗಡೆಯಾಗಲಿವೆ. ಸೆ.23 ರಿಂದ ಮಳಿಗೆ ಕಾಯ್ದಿರಿಸುವಿಕೆ ಪ್ರಾರಂಭವಾಗಲಿದ್ದು ಹೆಚ್ಚಿನ ಮಾಹಿತಿಗೆ ದೂ: 080-23638883, 23330153 ಸಂಪರ್ಕಿಸಬಹುದು ಎಂದು ವಿವಿಯ ವಿಸ್ತರಣಾ ನಿರ್ದೇಶಕ ವಿ.ಎಲ್.ಮಧುಪ್ರಸಾದ್ ತಿಳಿಸಿದ್ದಾರೆ.

**4 ಹೊಸ ತಳಿ ಲೋಕಾರ್ಪಣೆ:** ಮುಸುಕಿನ ಜೋಳದಲ್ಲಿ ಎಂಎಹೆಚ್ 15-84 ಎಂಬ ಮಧ್ಯಮಾವಧಿಯ ತಳಿಯನ್ನುವಿವಿ ಕಂಡು ಹಿಡಿದಿದ್ದು, ಹೆಕ್ಟೇರ್‌ಗೆ 92 ರಿಂದ 95 ಕ್ವಿಂಟಾಲ್ ಇಳುವರಿ ಬರಲಿದೆ. 80 ರಿಂದ 85 ದಿನಗಳ ಅವಧಿಯ ಅಲಸಂದೆಯ ಕೆಬಿಸಿ-12 ತಳಿಯನ್ನು ವಿವಿ ಆವಿಷ್ಕರಿಸಿದ್ದು ಹೆಕ್ಟೇರ್‌ಗೆ 14 ಕ್ವಿಂಟಾಲ್‌ವರೆಗೂ ಇಳುವರಿ ನೀಡಲಿದೆ.

80 ದಿನಗಳ ಅವಧಿಯ ಸೂರ್ಯಕಾಂತಿಯ ಕೆಬಿಎಸ್-90 ತಳಿಯು ಹೆಕ್ಟೇರ್‌ಗೆ 24 ಕ್ವಿಂಟಾಲ್ ನಷ್ಟು ಇಳುವರಿ ಬರಲಿದ್ದು ಅಧಿಕ ತೈಲದ ಅಂಶವನ್ನು ಒಳಗೊಂಡಿದೆ. ಉತ್ತಮ ಪೌಷ್ಟಿಕಾಂಶ ಇರುವ, ಹೆಚ್ಚು ಮೇವಿನ ಇಳುವರಿ ಹೊಂದಿರುವ ಬಾಜ್ರ ನೇಪಿಯರ್ ತಳಿಯನ್ನು ಕಂಡುಹಿಡಿಯಲಾಗಿದ್ದು ಹೆಕ್ಟೇರ್‌ಗೆ 1497 ಕ್ವಿಂಟಾಲ್ ಹಸಿರು ಮೇವು ಸಿಗಲಿದೆ ಎಂದು ವಿವಿ ತಿಳಿಸಿದೆ.

**19 ನೂತನ ತಾಂತ್ರಿಕತೆ:** ಸುಧಾರಿತ ಬೇಸಾಯ ಪದ್ಧತಿಯಡಿ 19 ನೂತನ ತಾಂತ್ರಿಕೆಗಳನ್ನೂ ವಿವಿ ಸಂಶೋಧಿಸಿದೆ. ಕೈಚಾಲಿತ ರಾಗಿ ಹಾಗೂ ಗೊಬ್ಬರದ ಸಂಯುಕ್ತ ಕೂರಿಗೆಯನ್ನು ಸಂಶೋಧಿಸಿದ್ದು ಇಬ್ಬರು ಕೃಷಿ ಕಾರ್ಮಿಕರ ಸಹಾಯದಿಂದ ದಿನಕ್ಕೆ 1.5 ಎಕರೆಯಲ್ಲಿ ಬಿತ್ತನೆ ಮಾಡಬಹುದು. ಜತೆಗೆ ಬಹು-ಬೆಳೆ ಸಂಸ್ಕರಣಾ ಯಂತ್ರ ಆವಿಷ್ಕರಿಸಿದ್ದು ಈ ಯಂತ್ರ ಪ್ರತಿ ಗಂಟೆಗೆ 40 ರಿಂದ 50 ಕೆಜಿ ಶೇಂಗಾವನ್ನು ಗಿಡದಿಂದ ಬೇರ್ಪಡಿಸುತ್ತದೆ. ಸೂರ್ಯಕಾಂತಿ, ಮೆಕ್ಕೆಜೋಳದಿಂದ ಬೀಜಗಳನ್ನು ಬೇರ್ಪಡಿಸಲೂ ಇದನ್ನು ಉಪಯೋಗಿಸಬಹುದು.

ಮುಸುಕಿನ ಜೋಳದಲ್ಲಿ ಕಳೆ ನಿರ್ವಹಣೆ, ರಸಗೊಬ್ಬರಗಳ ಸಮರ್ಪಕ ಬಳಕೆ, ತೇಗದಲ್ಲಿ ಅಂತರ ಬೆಳೆಯಾಗಿ ಮೇವಿನ ಹುಲ್ಲುಗಳು, ನೈಸರ್ಗಿಕ ಪದ್ಧತಿಯಲ್ಲಿ ಇಲಿಗಳ ನಿರ್ವಹಣೆ, ಹತ್ತಿ ಬೆಳೆಯಲ್ಲಿ ಗುಲಾಬಿ ಕಾಯಿಕೊರಕದ ನಿರ್ವಹಣೆ ಸೇರಿದಂತೆ ಒಟ್ಟಾರೆ 19 ತಾಂತ್ರಿಕತೆಗಳನ್ನೂ ಕೃಷಿ ಮೇಳದಲ್ಲಿ ಅನಾವರಣಗೊಳಿಸಲಾಗುವುದು.





### ಎಲ್ಲರಿಗಿಂತ ಮೊದಲೇ ತಿಳಿಯುವುದು ಇಲ್ಲೇ!

ನವೆಂಬರ್ ಎರಡನೇ ವಾರ 'ಕೃಷಿ ಮೇಳ' ಆಯೋಜನೆಯಾಗಲಿದ್ದು, ಅಧಿಕ ಇಳುವರಿಯ 4 ತಳಿಗಳನ್ನು ಲೋಕಾರ್ಪಣೆಗೊಳಿಸಲಾಗುವುದು ಎಂದು ಆ.13 ರಂದು 'ಕನ್ನಡಪ್ರಭ' ವರದಿ ಮಾಡಿತ್ತು.

ನವೆಂಬರ್ 2ನೇ ವಾರ ಕೃಷಿ ಮೇಳ
ಅಧಿಕ ಇಳುವರಿಯ ಜೋಳ, ಅಲಸಂದೆ, ಸೂರ್ಯಕಾಂತಿ ಲೋಕಾರ್ಪಣೆಗೆ ಭಾರಿ ಸಿದ್ಧತೆ
ಬೆಳೆ ಸಂರಕ್ಷಣೆ, ಕಳೆ ನಿರ್ವಹಣೆ, ಉತ್ಪಾದನೆ ಸೇರಿ 17 ನೂತನ ತಾಂತ್ರಿಕತೆಗಳ ಅನಾವರಣ
..ಧಿಕ ಎಣ್ಣೆ ಅಂಶದ ಸೂರ್ಯಕಾಂತಿ

18-09-2024
Kannada Prabha Pg.05

ಅನ್ನದಾತ | ಎಥೆನಾಲ್ ಉತ್ಪಾದನೆಗೆ ಮೆಕ್ಕೆಜೋಳ ಬಳಕೆ ಹಿನ್ನೆಲೆ ದರ ಏರಿಕೆ | ಕ್ವಿಂಟಲ್‌ಗೆ 2,950 ರೂಪಾಯಿವರೆಗೂ ಮಾರಾಟ

# ಮೊದಲ ಸಲ ಮೆಕ್ಕೆಜೋಳಕ್ಕೆ ಬಂಪರ್ ಬೆಲೆ: ರೈತರಲ್ಲಿ ಸಂತಸ

• **ಸೋಮರಡ್ಡಿ ಅಳವಂಡಿ**

**ಕನ್ನಡಪ್ರಭ ವಾರ್ತೆ** ಕೊಪ್ಪಳ

ಕೋಳಿ ಆಹಾರ ಸೇರಿ ಕೆಲವೇ ಕೆಲವು ಉದ್ಯಮಗಳಿಗೆ ಸೀಮಿತವಾಗಿದ್ದ ಮೆಕ್ಕೆಜೋಳದಿಂದ ಈಗ ಎಥೆನಾಲ್ ಉತ್ಪಾದನೆ ಮಾಡಲಾಗುತ್ತಿದ್ದು, ಭಾರಿ ಬೇಡಿಕೆ ಬಂದಿದೆ. ಇದೇ ಮೊದಲ ಬಾರಿಗೆ ಮಾರುಕಟ್ಟೆಯಲ್ಲಿ 2850 ರಿಂದ 2950 ರೂಪಾಯಿವರೆಗೂ ಕ್ವಿಂಟಲ್ ಮೆಕ್ಕೆಜೋಳ ಮಾರಾಟವಾಗುತ್ತಿದ್ದು ರೈತರು ಖುಷಿಯಾಗಿದ್ದಾರೆ.

ಕೊಪ್ಪಳ ಮಾರುಕಟ್ಟೆಯಲ್ಲಿ ಒಂದು ಕ್ವಿಂಟಲ್ ಮೆಕ್ಕೆಜೋಳ ₹2,950ವರೆಗೂ ಮಾರಾಟವಾಗಿದ್ದು, ಇದು ಈ ಹಿಂದಿನ ಎಲ್ಲ ದಾಖಲೆಗಳನ್ನು ಹಿಮ್ಮೆಟ್ಟಿಸಿದೆ. ಈ ಹಿಂದೆ ಮೆಕ್ಕೆಜೋಳ ಬೆಳೆದ ರೈತರು ಬೆಂಬಲ ಬೆಲೆಯಲ್ಲಿ ಬೆಳೆಯನ್ನು ಖರೀದಿಸುವಂತೆ ಸರ್ಕಾರದ ವಿರುದ್ಧ ಹೋರಾಟ ಮಾಡುತ್ತಿದ್ದರು. ಆದರೆ, ಪ್ರಸ್ತುತ ಕೇಂದ್ರ ಸರ್ಕಾರ ಘೋಷಿಸಿರುವ ₹2,330 ಬೆಂಬಲ ಬೆಲೆಗಿಂತಲೂ ದರ ಹೆಚ್ಚಳವಾಗಿದೆ. ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ಮೆಕ್ಕೆಜೋಳಕ್ಕೆ ₹2000 ಸಮೀಪ ದರ ಇರುತ್ತಿತ್ತು.



## ಕುಕ್ಕುಟೋದ್ಯಮಕ್ಕೆ ಕುತ್ತು: ಮೊಟ್ಟೆ ದರ ಹೆಚ್ಚಳ ಸಾಧ್ಯತೆ

ಮೆಕ್ಕೆಜೋಳ ದರ ಏರಿಕೆಯಾಗುತ್ತಿರುವುದರಿಂದ ಕುಕ್ಕುಟೋದ್ಯಮಕ್ಕೆ ಭಾರಿ ಪೆಟ್ಟು ಬಿದ್ದಿದೆ. ರಾಜ್ಯದ ಕೋಳಿ ಸಾಕಾಣಿಕೆಯಲ್ಲಿ ಮೆಕ್ಕೆಜೋಳವೇ ಪ್ರಮುಖ ಆಹಾರವಾಗಿದೆ. ಈಗ ಮೆಕ್ಕೆಜೋಳದ ದರ ಏರಿಕೆಯಾಗಿದ್ದು, ಕೋಳಿ ಸಾಕಾಣಿಕೆಗೆ ಭಾರಿ ಸಮಸ್ಯೆಯಾಗುತ್ತಿದೆ. ಇದು ಮುಂದಿನ ದಿನಗಳಲ್ಲಿ ಮೊಟ್ಟೆ ದರ ಏರಿಕೆಗೆ ಕಾರಣವಾದರೂ ಅಚ್ಚರಿ ಇಲ್ಲ ಎನ್ನಲಾಗುತ್ತಿದೆ.

**ಎಥೆನಾಲ್ ಉತ್ಪಾದನೆ:** ಈ ಮೊದಲು ಕಬ್ಬು ಮತ್ತು ಅಕ್ಕಿಯಿಂದ ಮಾತ್ರ ಉತ್ಪಾದನೆ ಮಾಡುತ್ತಿದ್ದ ಎಥೆನಾಲ್ ಅನ್ನು ಈಗ ಮೆಕ್ಕೆಜೋಳದಿಂದಲೂ ಉತ್ಪಾದನೆ ಮಾಡಲಾಗುತ್ತಿದೆ. ರಾಜ್ಯದ ಹತ್ತು ಕಬ್ಬು ಕಾರ್ಖಾನೆಗಳಿಗೆ ಎಥೆನಾಲ್ ಉತ್ಪಾದನೆಗೆ ಅನುಮತಿ ನೀಡಲಾಗಿದ್ದು, ಈ ಹತ್ತು ಕಾರ್ಖಾನೆಗಳಿಗೆ ಪ್ರತಿ ದಿನ 70 ಸಾವಿರ ಕ್ವಿಂಟಲ್ ಮೆಕ್ಕೆಜೋಳ ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ. ಈಗಾಗಲೇ ಕಾರ್ಖಾನೆಯ ಮಾಲೀಕರು ಮೆಕ್ಕೆಜೋಳ ವ್ಯಾಪಾರಸ್ಥರೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಮೆಕ್ಕೆಜೋಳಕ್ಕೆ ಭಾರಿ ಬೇಡಿಕೆ ಬಂದಿದೆ.

**ಗರಿಷ್ಠ ದರಕ್ಕೆ ನಿರ್ಬಂಧ:** ಎಥೆನಾಲ್ ಉತ್ಪಾದನೆಗಾಗಿ ಮೆಕ್ಕೆಜೋಳ ಖರೀದಿಸಲು ಗರಿಷ್ಠ ದರಕ್ಕೆ ನಿರ್ಬಂಧ ಹೇರಲಾಗಿದೆ. ಒಂದುವೇಳೆ ಮುಕ್ತ ಅವಕಾಶ ನೀಡಿದ್ದರೆ ಮೆಕ್ಕೆಜೋಳದ ದರ ಆಕಾಶಕ್ಕೆ ಹೋಗುತ್ತಿತ್ತು. ಆಗ ಮೆಕ್ಕೆಜೋಳದ ಮೇಲೆ ಅವಲಂಬನೆಯಾಗಿರುವ ಇತರ ಉದ್ಯಮಗಳಿಗೆ ಪೆಟ್ಟಾಗುತ್ತದೆ ಎಂದು ಬೆಲೆ ನಿಯಂತ್ರಣ ಮಾಡಲಾಗಿದೆ. ಹೀಗಾಗಿ, ಈ ವರ್ಷವಂತೂ 2,700 –2,950 ರೂ.ಗೆ ಕ್ವಿಂಟಲ್ ಮೆಕ್ಕೆಜೋಳ ಮಾರಾಟವಾಗುತ್ತಿದೆ. 2,500 ರೂ.ಗೂ ಅಧಿಕ ದರದಲ್ಲಿ ಮಾರಾಟವಾದರೆ ರೈತರಿಗೆ ಲಾಭವೇ ಆಗಲಿದೆ.

### ಹಿಂದಿಗಿಂತ ಉತ್ತಮ ದರ

ಮೆಕ್ಕೆಜೋಳ ದರ ಹಿಂದಿಗಿಂತಲೂ ಉತ್ತಮವಾಗಿದೆ. ಇದೇ ಸ್ಥಿತಿಯಲ್ಲಿ ಮುಂದುವರೆಯುವ ಸಾಧ್ಯತೆ ಇದೆ. ಮೆಕ್ಕೆಜೋಳದಿಂದ ಎಥೆನಾಲ್ ಉತ್ಪಾದನೆಗೆ ಅವಕಾಶ ನೀಡಲಾಗಿದ್ದರೂ ಬೆಲೆ ನಿರ್ಬಂಧವೂ ಇದೆ.

• **ಗೌತಮ ಜಾಂಗಡಾ** ಮೆಕ್ಕೆಜೋಳ ರಫ್ತುದಾರ

### ಇಷ್ಟು ಬೇಡಿಕೆ ಇರಲಿಲ್ಲ

ಮೆಕ್ಕೆಜೋಳಕ್ಕೆ ಈ ಹಿಂದೆ ಯಾವಾಗಲೂ ಇಷ್ಟೊಂದು ಬೇಡಿಕೆ ಬಂದಿರಲಿಲ್ಲ. ಈಗ ₹2,900 ಆಸುಪಾಸು ಮಾರಾಟವಾಗುತ್ತಿದೆ.

• **ವಿರುಪಾಕ್ಷಪ್ಪ ಯತ್ರಮನಳ್ಳಿ** ದಲಾಲಿ ವರ್ತಕ

18-09-2024
Kannada Prabha Pg.06

# ಪ್ರೊಟೀನ್‌ನ ಹೊಸ ಮೂಲ ಬಿದಿರು

**ಜಗತ್ತಿನೆಲ್ಲೆಡೆ ಸೆಪ್ಟೆಂಬರ್ 18ರಂದು ವಿಶ್ವ ಬಿದಿರು ದಿನವನ್ನು ಆಚರಿಸಲಾಗುತ್ತದೆ. ಔಷಧ, ಕಟ್ಟಡ ನಿರ್ಮಾಣ, ಇಂಧನ ಮೂಲ, ಪೀಠೋಪಕರಣ, ಅಲಂಕಾರ ವಸ್ತು, ಜವಳಿ ಕ್ಷೇತ್ರಗಳಲ್ಲಿ ಹಾಸು ಹೊಕ್ಕಾಗಿರುವ ಬಿದಿರಿನ ಜಾದು ಆಹಾರ ಕ್ಷೇತ್ರದಲ್ಲೂ ಮೋಡಿ ಮಾಡಿದೆ.**

**ಬಬಿತಾ ಎಸ್.**
babitha.salian@timesofindia.com



ಬ್ಯಾಂಬು ಬಿರಿಯಾನಿ, ಬ್ಯಾಂಬು ಚಿಕನ್, ಬಿದಿರಿನ ಗ್ರಿಲ್ ಚಿಕನ್, ಬಿದಿರಿನ ಪುಟ್ಟು ಇತ್ಯಾದಿಗಳು ರೆಸ್ಟೋರೆಂಟ್ ಮೆನುಗಳಲ್ಲಿ ಇತ್ತೀಚೆಗೆ ಸೇರಿರುವ ಮೆನುಗಳು. ಬಿದಿರಿನ ಕೊಳವೆಯಲ್ಲಿ ಬೇಯಿಸಿ ಮಾಡುವ ಬಿರಿಯಾನಿ, ಕೋಳಿ ಮಾಂಸ, ಮಸಾಲೆಯನ್ನು ಬಿದಿರಿನ ಕೊಳವೆಗೆ ತುಂಬಿಸಿ ಕೆಂಡದಲ್ಲಿ ಸುಟ್ಟು ಸರ್ವ್ ಮಾಡಲಾಗುವ ಚಿಕನ್ ಕರ್ರಿಯ ರುಚಿಗೆ ಮಾರುಹೋಗದವರಿಲ್ಲ. ಬೆಂಕಿಯ ಬಿಸಿಗೆ ಬಿದಿರಿನಿಂದ ಉತ್ಪತ್ತಿಯಾಗುವ ನೈಸರ್ಗಿಕ ತೈಲ ಬಿರಿಯಾನಿಗೆ ವಿಶೇಷ ರುಚಿ ಕೊಡುವುದೇ ಇದಕ್ಕೆ ಕಾರಣವೆನ್ನಲಾಗಿದೆ.

**ರುಚಿಯ ಆಗರ:** ಇದೇ ರೀತಿ ಸಾಮಾನ್ಯ ಗ್ರಿಲ್‌ನಲ್ಲಿ ಬೇಯಿಸುವ ಚಿಕನ್‌ಗಿಂತ ಅರ್ಧ ಕತ್ತರಿಸಿದ ಬಿದಿರಿನ ಕೊಳವೆಯಲ್ಲಿಟ್ಟು ಸುಡುವ ಗ್ರಿಲ್ ಚಿಕನ್ ಇನ್ನೂ ರುಚಿ. ಸ್ಟೀಲ್ ಕೊಳವೆಯ ಹಬೆಯಲ್ಲಿ ಬೇಯುವ ಪುಟ್ಟುಗಿಂತ ಬಿದಿರಿನ ಕೊಳವೆಯಲ್ಲಿ ಬೇಯುವ ಪುಟ್ಟು ಪರಿಮಳ ಮತ್ತು ರುಚಿ ಇನ್ನೂ ಉತ್ತಮ. ಹೀಗೆ ನೈಸರ್ಗಿಕ ಬಿದಿರಿನ ಸೊಗಡು ಮತ್ತು ಅದರಲ್ಲಿರುವ ಆರೋಗ್ಯ ಪ್ರಯೋಜನ ಪಡೆಯಲು ಅದನ್ನು ಆಹಾರದಲ್ಲಿ ವಿವಿಧ ರೂಪಗಳಲ್ಲಿ ಬಳಸುವ ಪ್ರಯೋಗ ನಡೆಯುತ್ತಿದೆ.

**ಸೂಪರ್ ಫುಡ್**



**ಕೊಬ್ಬು ಕಡಿಮೆ:** ಚೀನಾದಲ್ಲಿ ನಡೆದ ಇತ್ತೀಚಿನ ಸಂಶೋಧನೆಯೊಂದು ಬಿದಿರು ಪ್ರೊಟೀನ್‌ನ ಹೊಸ ಮೂಲ ಎಂದಿದ್ದು, ಈ ವಿಷಯದಲ್ಲಿ ಅದು ಹಸುವಿನ ಹಾಲಿಗೆ ಸಮಾನ ಎಂದಿದೆ. ಭಾರತ ಸೇರಿದಂತೆ ದಕ್ಷಿಣ ಏಷ್ಯಾ ದೇಶಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಬಿದಿರಿನ ಖಾದ್ಯಗಳು ಹೊಸ ಪ್ರೊಟೀನ್ ಮೂಲವಾಗಿದ್ದು, ಅದರ ಬಳಕೆ ಈಗ ರೆಸ್ಟೋರೆಂಟ್‌ನಲ್ಲಿ ಮಾತ್ರವಲ್ಲದೆ, ಅಡುಗೆ ಮನೆಯಲ್ಲೂ ಸಾಮಾನ್ಯವಾಗಿದೆ. ಪ್ರೊಟೀನ್ ಮಾತ್ರವಲ್ಲದೆ, ಅಮೈನೊ ಆಮ್ಲ, ಕಬ್ಬಿಣ, ನಾರಿನಂಶ ಕೂಡ ಹೆಚ್ಚಿರುವ ಇದರಲ್ಲಿ ಕೊಬ್ಬಿನ ಪ್ರಮಾಣ ಅತ್ಯಲ್ಪವಾಗಿರುತ್ತದೆ.

**ಎಳೆ ಬಿದಿರು:** ಬಿದಿರಿನ ಖಾದ್ಯ ಸೇವನೆಯಿಂದ ಬೊಜ್ಜು, ಮಧುಮೇಹ, ಕ್ಯಾನ್ಸರ್ ಬರುವ ಅಪಾಯಗಳನ್ನು ಪರಿಣಾಮಕಾರಿಯಾಗಿ ತಡೆಯಬಹುದು ಎನ್ನಲಾಗಿದೆ. ಈ ಬಗ್ಗೆ ಷೆಫ್ ನಾಗರೇಖಾ ಪಲ್ಲಿ, 'ಬಿದಿರಿನ ಕೊಳವೆಯಲ್ಲಿ ಬೇಯಿಸುವ ಖಾದ್ಯಗಳಿಗೆ ಎಣ್ಣೆಯ ಬಳಕೆ ಇಲ್ಲದ ಕಾರಣ ಇದು ಆರೋಗ್ಯಕ್ಕೆ ಬಹಳ ಒಳ್ಳೆಯದು. ಈ ಕೊಳವೆಯಲ್ಲಿರುವ ನೈಸರ್ಗಿಕ ಎಣ್ಣೆ ಕೂಡ ಹಲವು ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ' ಎಂದು ಹೇಳಿದ್ದಾರೆ. ಬಿದಿರಿನ ಕೊಳವೆ ಮಾತ್ರವಲ್ಲದೆ, ಎಳೆ ಬಿದಿರಿನ ರೂಪವಾದ ಕಳಲೆಯ ಬಳಕೆಯೂ ಹೆಚ್ಚಿದ್ದು, ಇದರಿಂದಲೂ ರುಚಿಕರ ಖಾದ್ಯ ಮಾಡಿ ಅದರಲ್ಲಿರುವ ಪೋಷಕಾಂಶದ ಪ್ರಯೋಜನ ಪಡೆಯಬಹುದು ಎನ್ನಲಾಗಿದೆ.



**ಜಪಾನೀಸ್, ಥಾಯ್, ಚೈನೀಸ್ ಮತ್ತು ಇತರ ಏಷ್ಯನ್ ಆಹಾರಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ವಿವಿಧ ರೀತಿಯ ಬ್ಯಾಂಬುಗಳು ಕಡಿಮೆ ಕ್ಯಾಲೊರಿ ಹೊಂದಿದ್ದು, ವಿವಿಧ ಪೌಷ್ಟಿಕಾಂಶಗಳ ಆಗರವಾಗಿವೆ. ಇದನ್ನೀಗ ಸೂಪರ್‌ಫುಡ್ ಎನ್ನಲಾಗುತ್ತದೆ. ಆದರೆ ಸೂಕ್ತ ವಿಧಾನದಲ್ಲಿ ಬೇಯಿಸಿರುವ ಬಿದಿರಿನ ಖಾದ್ಯಗಳನ್ನೇ ಸೇವಿಸಿ. ಅರೆಬರೆ ಬೆಂದ ಅಥವಾ ಹಸಿಯಾಗಿರುವುದನ್ನು ತಿನ್ನಬೇಡಿ.**

**-ನಾಗರೇಖಾ ಪಲ್ಲಿ | ಷೆಫ್**

18-09-2024
Vijaya Kar. Pg.11

